ಮುಖ್ಯರಾಗಿದ್ದರು. ಕೇರಳ ಮೂಲದವರಾಗಿದ್ದ ಹಯಾತ್ ಸಾಹೇಬರು ದೇವನೂರಿಗೆ ವಲಸೆ ಬಂದು ಅಲ್ಲಿನ ರಾಘವಯ್ಯಂಗಾರ್ ಅವರ ಮನೆಯಲ್ಲಿ ದನ ಕಾಯ್ದುಕೊಂಡಿದ್ದರಂತೆ. ಕ್ರಮೇಣ ಅವರ ಸಜ್ಜನಿಕೆಯ ಶಕ್ತಿಯಿಂದ ಊರಿಗೆಲ್ಲ ಹಿರಿಯರಾಗಿ ತಾವೇ ದೇವಾಲಯದ ಕಮಿಟಿಯ ಕನ್ವೀನರ್ ಆಗಿ ಬೆಂಗಳೂರಿಗೆ ಬಂದು ಡಿ.ವಿ.ಜಿ., ಮಾಸ್ತಿ, ಎಂ.ಆರ್.ಶ್ರೀ ಅವರ ಮನೆಗಳಿಗೆಲ್ಲ ಹೋಗಿ ಅವರನ್ನು ಜಯಂತಿಗೆ ಆಹ್ವಾನಿಸಿ ಸಮಾರಂಭ ನೆರವೇರಿಸಿದ್ದನ್ನು ಬೆಳಗೆರೆ ಕೃಷ್ಣಶಾಸ್ತ್ರಿಗಳು ತಮ್ಮ 'ಮರೆಯಲಾದೀತೆ' ಕೃತಿಯಲ್ಲಿ ವಿವರಿಸುತ್ತಾರೆ. ಲಕ್ಷ್ಮೀಶ ಕವಿ ಜಯಂತಿಯನ್ನೂ, ದೇವರು ಲಕ್ಷ್ಮೀಕಾಂತನ ಜಾತ್ರೆಯ ಉತ್ಸವವನ್ನೂ ನೆರವೇರಿಸುವಲ್ಲಿ ಸಾಹೇಬರು ಕೈಯ್ಯಲ್ಲಿ ಗಂಧದ ಕಡ್ಡಿ ಹಿಡಿದುಕೊಂಡು ದೇವರ ಕಡೆಗೇ ಮುಖ ಮಾಡಿಕೊಂಡು ಗುಂಪಿನಲ್ಲಿ ಹಿಮ್ಮುಖವಾಗಿ ನಡೆಯುತ್ತಿದ್ದರಂತೆ. ಪಕ್ಕದಲ್ಲಿ ಕೃಷ್ಣಶಾಸ್ತ್ರಿಗಳು ಸಾಹೇಬರೇ ದೇವರಿಗೆ ಮುಖ ಮಾಡಿ ಹಿಂದು ಹಿಂದಾಗಿ ನಡೆದು ಎಡವಿದರೆ ಕಷ್ಟ ಅಂದರೆ, 'ಅಯ್ಯೋ ಎಲ್ಲಿಯಾದರೂ ಉಂಟೇ ದೇವರಿಗೆ ಬೆನ್ನು ತೋರಿಸಿ ನಡೆಯುವುದೇ' ಅಂದರಂತೆ. ಹಯಾತ್ ಸಾಹೇಬರು ಉತ್ಸವದ ದಾರಿಪೂರ ದೇವರಿಗೆ ಅಭಿಮುಖರಾಗಿ ನಡೆದರೆ, ಅಲ್ಲಿ ನೆರೆದ ನೂರು ಸಾವಿರ ಜನ ರೂಢಿಯಂತೆ ದೇವರಿಗೆ ಬೆನ್ನು ಕೊಟ್ಟೇ ನಡೆಯುತ್ತಿದ್ದರು!

ಇತ್ತೀಚೆಗೆ ಊರವರಿಗೆ ಏನನ್ನಿಸಿತೋ ಏನೋ ಒಂದು ದಿನ ಬೆಳಗ್ಗೆ ದೇವಾಲಯದ ಮುಂಭಾಗದಲ್ಲಿ ಅನ್ಯಧರ್ಮೀಯರಿಗೆ ಗುಡಿಯೊಳಗೆ ಪ್ರವೇಶವಿಲ್ಲ ಎಂಬ ಬೋರ್ಡು ತಗುಲಿಸಿದರು. ಮನ ನೊಂದುಕೊಂಡ ಹಯಾತ್ ಸಾಹೇಬರು ಕೃಷ್ಣಶಾಸ್ತ್ರಿಗಳಿಗೆ, 'ಹೊರಗಡೆ ನಿಂತರೂ ಗರ್ಭಗುಡಿಯ ದೇವರು, ನಂದಾದೀಪ ಕಂಡೇ ಕಾಣುತ್ತದಲ್ಲ ಬಿಡಿ' ಅಂದರು.

ಇಂಥ ಸಂದರ್ಭದಲ್ಲೇ ಊರಿಗೆ ಪ್ಲೇಗು ಆವರಿಸಿತು. ಜನವೆಲ್ಲ ಊರು ಬಿಡಬೇಕು. ಒಂಟಿಯಾಗಿದ್ದ ಕೃಷ್ಣಶಾಸ್ತ್ರಿಗಳೂ ತಮ್ಮ ಕೋಣೆಯ ತಟ್ಟೆ, ಪುಟ್ಟಿ, ಚಾಪೆ, ಹೊದಿಕೆ ಎತ್ತಿಕೊಂಡು ಹಯಾತ್ ಸಾಹೇಬರಿಗೆ, 'ನೀವು ಬರುವುದಿಲ್ಲವೇ' ಅಂದರು. ಲಕ್ಷ್ಮೀಕಾಂತ ದೇವಾಲಯದ ಹಿಂಭಾಗದ ಗೋಡೆಗಂಟಿದ ಮನೆಯಲ್ಲಿದ್ದ ಸಾಹೇಬರು ರಾತ್ರಿ ಮಲಗಿರುವಲ್ಲಿ ಕನಸಿನೊಳಗೆ ಬಂದ ದೈವೀಕ ಪುರುಷರೊಬ್ಬರು, 'ನೀನು ಈ ಜಾಗ ಬಿಡಬೇಡ, ನಿನ್ನ ರಕ್ಷಣೆಯ ಜವಾಬ್ದಾರಿ ನನ್ನದು' ಅಂದಂತಾಗಲು ಸಾಹೇಬರು ಮನೆ ಬಿಟ್ಟು ಬರುವುದಿಲ್ಲ ಅಂದರಂತೆ. ಹಯಾತ್ ಸಾಹೇಬರು ಆಡಿದ ಈ ಮಾತು ಕೇವಲ ಕನಸೋ, ಪವಾಡ ಮಾದರಿಯದ್ದೋ, ಅವರ ವ್ಯಕ್ತಿತ್ವದ ಅಂತಃಸತ್ವದಿಂದಲೇ ಮೂಡಿಬಂದ ಅರಿವೋ, ಒಟ್ಟು ಪ್ರಸಂಗ ಮಾತ್ರ ಓದುಗರ ಅಂತರಂಗ ಮುಟ್ಟುವಂತಿದೆ. ಈ ಸಂಗತಿಯನ್ನು ನಂಬಬೇಕು; ಯಾಕೆಂದರೆ ಇದನ್ನು ಮೇಲಿಂದ ಮೇಲೆ ಹೇಳುತ್ತಿದ್ದವರು, ಬರೆದವರು ಗಾಂಧಿ, ವಿನೋಬಾ ಅವರ ಅನುಯಾಯಿಗಳೂ ಇರುವ ವರೆಗೂ ರಮಣ ಮಹರ್ಷಿಗಳ ನೆನಪಿನಲ್ಲಿ ಬಾಗಿಲೇ ಇಲ್ಲದ ಒಂದಂಕಣದ ಗುಡಿಸಲಲ್ಲಿ ಬದುಕಿದ್ದ ಕೃಷ್ಣಶಾಸ್ತ್ರಿಗಳು. ಅಷ್ಟೇ ಅಲ್ಲ ಲೇಖನದ ಕೊನೆಯಲ್ಲಿ, 'ನನ್ನ ಜೀವನದಲ್ಲಿ ಇಂಥ ವ್ಯಕ್ತಿಯನ್ನು ನೋಡಿದ್ದೇ ಪುಣ್ಯ' ಅಂದಿದ್ದಾರೆ.

★★★

ಕುಮಾರವ್ಯಾಸನಂತೆ ತನ್ನ ವೈಯ್ಯಕ್ತಿಕ ವಿಚಾರವಾಗಿ ಏನನ್ನೂ ಹೇಳದೇಹೋದ ಕವಿಯಲ್ಲ ಲಕ್ಷ್ಮೀಶ. ತಂದೆ ಅಣ್ಣಮಾಂಕ, ತನ್ನದು ಭಾರದ್ವಾಜ ಗೋತ್ರ, ಜನ್ಮಸ್ಥಳ ದೇವನೂರು, ಬಿರುದು ಕರ್ಣಾಟ ಕವಿ ಚೂತವನ ಚೈತ್ರ ಎಂದೆಲ್ಲ ಹೇಳಿಕೊಂಡಿದ್ದಾನೆ. ಕುಮಾರವ್ಯಾಸ ತಾನು ಬರೆದದ್ದು ಜಂಗಮ ಜನಾರ್ದನರಿಗೆ ಎಂದಿದ್ದರೆ ಲಕ್ಷ್ಮೀಶ ತನ್ನ ಕೃತಿ ವಿದ್ವತ್‌ಸಭಾ ವಲಯಕ್ಕೆ ಎಂದಿದ್ದಾನೆ. ಕನ್ನಡದ ಬಹುತೇಕ ಕವಿಗಳು ತಮ್ಮ ಕೃತಿ ಪಾಮರರಿಗಲ್ಲ ಎಂತಲೇ ಹೇಳುತ್ತಾರೆ. ಇಲ್ಲಿಯೇ ಗಮನಿಸಬೇಕಾದ ಒಂದು ಸಂಗತಿಯೆಂದರೆ ಇಂಥದ್ದೇ ಸಾಂಪ್ರದಾಯಿಕ ಪಾಂಡಿತ್ಯ ಪ್ರದರ್ಶನದ ಹಿನ್ನೆಲೆಯಲ್ಲೇ ವಚನ